<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**O.S. 75/2024 PW :- 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಶ್ರೀ ಜೆ.ಸಿ.ಬಿ ವಕೀಲರಿಂದಃ-**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಓದಲು ಬರೆಯಲು ಬರುತ್ತದೆ. ಕೋರ್ಟು ಕಛೇರಿಗಳ ವ್ಯವಹಾರದ ಬಗ್ಗೆ ಜ್ಞಾನ ಇದೆ. ನನ್ನ ತಂದೆಯ ಹೆಸರು ಲಿಂಗನಗೌಡ. ನನ್ನ ತಂದೆಗೆ 4 ಜನ ಅಣ್ಣ-ತಮ್ಮಂದಿರು. ನಮ್ಮ ತಂದೆ ಮರಣ ಹೊಂದಿದ್ದಾರೆ. ನಮ್ಮ ತಂದೆ ಯಾವ ದಿನಾಂಕ ಮತ್ತು ಇಸವಿಯಂದು ಮರಣ ಹೊಂದಿದ್ದಾರೆ ಎಂದು ಈಗ ಹೇಳಲಾಗುವುದಿಲ್ಲ. ನಮ್ಮ ತಂದೆಗೆ 3 ಜನ ಮಕ್ಕಳು. ಅವರ ಹೆಸರು ನೀಲಕಂಠಗೌಡ 1 ನೇ ಪ್ರತಿವಾದಿ, 2 ನೇದವರು ನಾನು, 3 ನೇದವರು 2 ನೇ ಪ್ರತಿವಾದಿ. ನಮ್ಮ ತಂದೆ ಶಿಕ್ಷಕ ಇದ್ದರು. 36-37 ವರ್ಷಗಳ ಹಿಂದೆ ನನ್ನ ಮದುವೆ ಆಗಿದೆ. ನನ್ನ ಗಂಡ ಮರಣಹೊಂದಿದ್ದಾರೆ ಅವರು ಕೃಷಿ ಮಾಡುತ್ತಿದ್ದರು. ನನ್ನ ಗಂಡನ ಊರು ಹುಲಗೂರು. ನನಗೆ ಒಬ್ಬ ಮಗ ಇದ್ದಾನೆ. ನನ್ನ ಮಗ ಕೃಷಿ ಮಾಡುತ್ತಾನೆ. ಆತ 7 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದಾನೆ. ನಾನು ಹುಲಗೂರಿನಲ್ಲಿ ಇರುತ್ತಾನೆ. 1 ನೇ ಪ್ರತಿವಾದಿ ನೀಲಕಂಠಗೌಡ ನ್ಯಾಯಾಲಯದಲ್ಲಿ ಇದ್ದಾನೆ. ನನ್ನ ಮದುವೆ ಮೊದಲು ಆಯಿತು ನಂತರ ಪ್ರತಿವಾದಿಯ 1 ನೇದವರ ಮದುವೆ ಆಯಿತು. ನನ್ನ ಗಂಡನ ಮನೆಯಲ್ಲಿ ಸ್ವಲ್ಪ ಆಸ್ತಿ ಇದೆ. 10-12 ಎಕರೆ ಇದೆ. ಹುಲಗೂರಿನಲ್ಲಿ ಪಾಟೀಲರ ಮನೆತನ ದೊಡ್ಡ ಮನೆತನ ಅಂದರೆ ಸರಿ. ನನ್ನ ತಂದೆ ನಿಂತು ನನ್ನ ಮದುವೆ ಮಾಡಿದ್ದಾರೆ ಅಂದರೆ ಸರಿ. ಹುಲಗೂರಿನಲ್ಲಿ ಪಾಟೀಲರ ಮನೆತನ ದೊಡ್ಡ ಮನೆತನ ಆಗಿದ್ದರಿಂದ ಆಗಿನ ಕಾಲದಲ್ಲಿ 15 ತೊಲೆ ಬಂಗಾರ, 2 ಲಕ್ಷ ರೂಪಾಯಿ ಹಣ ಕೊಟ್ಟು ನನ್ನ ಮದುವೆ ಮಾಡಿದ್ದಾರೆ ಅಂದರೆ ಸರಿಯಲ್ಲ. ಆ 15 ತೊಲೆ ಬಂಗಾರ, 2 ಲಕ್ಷ ರೂಪಾಯಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮದುವೆ 30 ವರ್ಷದ ಹಿಂದೆ ಆಗಿರಬಹುದು. ಅಗಡಿ ಗ್ರಾಮದಲ್ಲಿ ಹಿತ್ತಲ ಮನೆತನ ಕುಟುಂಬ ದೊಡ್ಡ ಕುಟುಂಬ ಅಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿಯ ತವರುಮನೆ ಸವದತ್ತಿ ತಾಲೂಕಿನ ಬೇಟಸೂರು. 1 ನೇ ಪ್ರತಿವಾದಿ ಸೊಸೈಟಿಯ ಸೆಕ್ರಟರಿ. 1 ನೇ ಪ್ರತಿವಾದಿ ಹುಬ್ಬಳ್ಳಿ-ಬಿಡ್ನಾಳದಲ್ಲಿ ಇರುತ್ತಾರೆ. ನಾನೇ ವಕೀಲರಿಗೆ ಮಾಹಿತಿ ನೀಡಿದ್ದೇನೆ. ನಾನು ವಾದ ಪತ್ರದಲ್ಲಿ 1 ನೇ ಪ್ರತಿವಾದಿ ಗಿರಣಿ ಹತ್ತಿರ ಬಿಡ್ನಾಳ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ಬರೆಯಿಸಿಲ್ಲ. ವಕೀಲರು ಸುಳ್ಳು ಮಾಹಿತಿ ನೀಡಿಲ್ಲ. ನಾನು ಸುಳ್ಳು ಮಾಹಿತಿ ನ್ಯಾಯಾಲಯಕ್ಕೆ ನೀಡಿಲ್ಲ. ನನ್ನ ತಂದೆ ಮತ್ತು ಆತನ ಅಣ್ಣ-ತಮ್ಮಂದಿರು ಯಾವಾಗ ವಿಭಾಗ

ಆಗಿದ್ದರು ಎಂದು ಗೊತ್ತಿಲ್ಲ. ನಮ್ಮ ತಂದೆ ಯಾವಾಗ ವಿಭಾಗ ಮಾಡಿಕೊಂಡರು ಎಂದು ವಾದ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ನಮ್ಮ ತಂದೆಯ ಸಹೋದರ ನಡುವೆ ಆದ ಪಾಲುವಿಭಾಗದಲ್ಲಿ ಯಾ ವ್ಯಾವ ಆಸ್ತಿಗಳು ನಮ್ಮ ತಂದೆಗೆ ಬಂದವು ಎಂದು ಹೇಳಲಾಗುವುದಿಲ್ಲ. ಸದರಿ ಆಸ್ತಿಗಳು ನಮ್ಮ ತಂದೆಗೆ ಪಾಲುವಿಭಾಗದಲ್ಲಿ ಬಂದಿವೆ ಎಂದು ಹೇಳಿ ಬರೆಯಿಸಿಲ್ಲ. 100 ಎಕರೆ ಜಮೀನು ನಮ್ಮ ಮನೆತನಕ್ಕೆ ಇದೆ. ನಾನು 20 ಎಕರೆಗೆ ದಾವೆ ಸಲ್ಲಿಸಿದ್ದೇನೆ. ಸರ್ವೇ ನಂ.148, 1/1, 171 ಇಷ್ಟು ಮಾತ್ರ ನೆನಪು ಇವೆ. ಸರ್ವೇ ನಂಬರ 148 11 ಎಕರೆ 28 ಗುಂಟೆ ಇದೆ, ಸರ್ವೇ ನಂಬರ 1/1 13 ಗುಂಟೆ, ಸರ್ವೇ ನಂಬರ 171 4 ಎಕರೆ 38 ಗುಂಟೆ ಇದೆ. ಈ ಮೇಲೆ ಹೇಳಿದ ಆಸ್ತಿಗಳು ಅಲ್ಲದೆ ನಮ್ಮ ಮನೆತನಕ್ಕೆ ಬೇರೆ ಆಸ್ತಿಗಳು ಇವೆ. ಬೇರೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ಅಗಡಿ ಗ್ರಾಮದಲ್ಲಿ ಮನೆ, ಹೊರ ಹಿತ್ತಲ ಇದೆ. ಮನೆ ಮತ್ತು ಹಿತ್ತಲ ಜಾಗೆ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಮಹಾದೇವಪ್ಪ ಉಳ್ಳಾಗಡ್ಡಿ ಅಜ್ಜ ಆಗಬೇಕು. ಮಹಾದೇವಪ್ಪ ಉಳ್ಳಾಗಡ್ಡಿ ಅಸಲು ದಾವಾ ಸಂಖ್ಯೆ 332/2024 1 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ದಾವೆಯನ್ನು ನಮ್ಮ ಮತ್ತು ನಮ್ಮ ಕುಟುಂಬದ ವಿರುದ್ಧ ಸಲ್ಲಿಸಿದ್ದು ಗೊತ್ತಿಲ್ಲ. ಆ ದಾವೆಯ ಸಮನ್ಸು ನನಗೆ ಬಂದಿತ್ತು ಅಂದರೆ ಸರಿ. ಮಹಾದೇವಪ್ಪ ಉಳ್ಳಾಗಡ್ಡಿಯವರು ನಮ್ಮ ಮನೆತನದ 10 ಗುಂಟೆ 4 ಅಣೆ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಸಲ್ಲಿಸಿದ್ದಾರೆ ಅಂದರೆ ಗೊತ್ತಿಲ್ಲ. ಆ 10 ಗುಂಟೆ 4 ಅಣೆ ಜಾಗ ಈ ದಾವೆಯಲ್ಲಿ ದಾವಾ ಆಸ್ತಿ ಇಲ್ಲ ಅಂದರೆ ಸರಿ. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ಆ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ಪಕ್ಷಕಾರರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಆಸ್ತಿಗೆ ಸಂಬಂಧಪಟ್ಟ ಎಲ್ಲರನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ.

**ಶ್ರೀ ಜೆ.ಸಿ.ಬಿ ವಕೀಲರು ಮುಂದಿನ ಪಾಟೀಸವಾಲಿಗೆ ಸಮಯ ಕೋರಿದ್ದಾರೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.